**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 55 |
| 2 | ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3 | ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು |
| 4 | ಉತ್ತರಿಸಬೇಕಾದ ದಿನಾಂಕ | : | 13.02.2024. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಾವು ಕೃಷಿ ಬೆಳೆಯನ್ನು ಬೆಳೆಯುತ್ತಿರುವ ರೈತರ ಸಂಖ್ಯೆ ಎಷ್ಟು; ಒಟ್ಟು ಮಾವು ಕೃಷಿ ಹೊಂದಿರುವ ಭೂ ವಿಸ್ತೀರ್ಣವೆಷ್ಟು; (ವಿವರ ನೀಡುವುದು) | ರಾಜ್ಯದಲ್ಲಿ ಮಾವು ಬೆಳೆಯನ್ನು ಬೆಳೆಯುತ್ತಿರುವ ರೈತರ ಸಂಖ್ಯೆ: 1,67,311.<br><br>ಒಟ್ಟು ಮಾವು ಕೃಷಿ ಹೊಂದಿರುವ ಭೂ ವಿಸ್ತೀರ್ಣ 1.48 ಲಕ್ಷ ಹೆಕ್ಟೇರ್ ವಿವರ ಈ ಕೆಳಕಂಡಂತಿದೆ. |

| ಸಂಖ್ಯೆ | ಜಿಲ್ಲೆ | ವಿಸ್ತೀರ್ಣ (ಹೆ) | ಮಾವು ಬೆಳೆಗಾರರ ಸಂಖ್ಯೆ |
|---|---|---|---|
| 1. | ಬೆಂಗಳೂರು ಗ್ರಾಮಾಂತರ | 5244 | 4268 |
| 2. | ಬಾಗಲಕೋಟೆ | 1054 | 1660 |
| 3. | ಬೆಂಗಳೂರು ನಗರ | 1949 | 1017 |
| 4. | ಬೆಳಗಾವಿ | 2908 | 2772 |
| 5. | ಬಳ್ಳಾರಿ | 167 | 97 |
| 6. | ಬೀದರ್ | 1470 | 676 |
| 7. | ಚಾಮರಾಜನಗರ | 611 | 420 |
| 8. | ಚಿಕ್ಕಬಳ್ಳಾಪುರ | 9881 | 9572 |
| 9. | ಚಿಕ್ಕಮಂಗಳೂರು | 1619 | 1101 |
| 10. | ಚಿತ್ರದುರ್ಗ | 1771 | 1380 |
| 11. | ದಕ್ಷಿಣ ಕನ್ನಡ | 275 | 412 |
| 12. | ದಾವಣಗೆರೆ | 1163 | 1019 |
| 13. | ಧಾರವಾಡ | 8576 | 9073 |
| 14. | ಗದಗ | 500 | 419 |
| 15. | ಹಾಸನ | 952 | 1157 |
| 16. | ಹಾವೇರಿ | 5010 | 4434 |
| 17. | ಕಲಬುರ್ಗಿ | 570 | 132 |
| 18. | ಕೊಡಗು | 33 | 25 |
| 19. | ಕೋಲಾರ | 45568 | 55190 |
| 20. | ಕೊಪ್ಪಳ | 1905 | 799 |
| 21. | ಮಂಡ್ಯ | 1806 | 2149 |
| 22. | ಮೈಸೂರು | 3494 | 3179 |
| 23. | ರಾಯಚೂರು | 1246 | 481 |
| 24. | ರಾಮನಗರ | 27722 | 32599 |
| 25. | ಶಿವಮೊಗ್ಗ | 2775 | 2616 |
| 26. | ತುಮಕೂರು | 16616 | 18156 |
| 27. | ಉಡುಪಿ | 268 | 528 |
| 28. | ಉತ್ತರ ಕನ್ನಡ | 2454 | 11436 |
| 29. | ವಿಜಯನಗರ | 589 | 308 |

| | | | | |
|---|---|---|---|---|
| 30. | ವಿಜಯಪುರ | 151 | 40 |
| 31. | ಯಾದಗಿರಿ | 198 | 96 |
| | | **148545** | **167311** |

| | | |
|---|---|---|
| ಆ) | 2022-23 ಮತ್ತು 2023-24ನೇ ಸಾಲಿನಲ್ಲಿ ಈವರೆಗೆ ರಾಜ್ಯದಿಂದ ಮಾವು ಫಸಲು ರಫ್ತು ಮಾಡಿರುವ ಪ್ರಮಾಣ ಎಷ್ಟು; ಕಳೆದೆರಡು ವರ್ಷಗಳಲ್ಲಿ ಮಾವು ರಫ್ತು ಪ್ರಮಾಣ ಕುಂಠಿತಗೊಂಡು ಮಾವು ಬೆಳೆಗಾರರು ಸಂಕಷ್ಟಕ್ಕೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ರಾಜ್ಯದ ರೈತರು ಬೆಳೆದ ಫಸಲು ರಫ್ತು ಆಗದಿರುವುದಕ್ಕೆ ಕಾರಣವೇನು: (ವಿವರ ನೀಡುವುದು) | ರಾಜ್ಯದಿಂದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (KIAL), ಎರ್ ಕಾರ್ಗೋ ವಿಭಾಗ ಬೆಂಗಳೂರಿನಿಂದ 2022ರ ಮಾವಿನ ಋತುವಿನಲ್ಲಿ 306 ಮೆಟ್ರಿಕ್ ಟನ್ ಮತ್ತು 2023ರ ಮಾವಿನ ಋತುವಿನಲ್ಲಿ 685 ಮೆಟ್ರಿಕ್ ಟನ್ ತಾಜಾ ಮಾವು ರಫ್ತಾಗಿರುತ್ತದೆ. 2024ರ ಮಾವಿನ ಋತು ಪ್ರಾರಂಭವಾಗಿರುವುದಿಲ್ಲ.<br>ಕಳೆದೆರಡು ವರ್ಷಗಳಲ್ಲಿ ಮಾವು ರಫ್ತು ಪ್ರಮಾಣವು ಮೇಲೆ ವಿವರಿಸಿರುವಂತೆ ದ್ವಿಗುಣವಾಗಿರುತ್ತದೆ. |
| ಇ) | ರಾಜ್ಯದ ರೈತರು ಬೆಳೆದ ಮಾವು ಬೆಳೆಯು ಅಂತರಾಷ್ಟ್ರೀಯ ಮಟ್ಟದಲ್ಲಿ ತೇರ್ಗಡೆ ಹೊಂದಲು ವೈಜ್ಞಾನಿಕವಾಗಿ ತಾಂತ್ರಿಕವಾಗಿ ಬೆಳೆಗಾರರಿಗೆ ಇಲಾಖೆಯಿಂದ ತಿಳುವಳಿಕೆ ನೀಡುವಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ: ಕ್ರಮ ಕೈಗೊಂಡಿದ್ದಲ್ಲಿ, ಬೆಳೆಗಾರರಿಗೆ ಯಾವ-ಯಾವ ತರಬೇತಿ ನೀಡಲಾಗಿದೆ? (ವಿವರ ನೀಡುವುದು) | ರಾಜ್ಯದ ರೈತರು ಬೆಳೆದ ಮಾವು ಬೆಳೆಯು ಅಂತರಾಷ್ಟ್ರೀಯ ಮಟ್ಟದಲ್ಲಿ ತೇರ್ಗಡೆ ಹೊಂದಲು ವೈಜ್ಞಾನಿಕವಾಗಿ ತಾಂತ್ರಿಕವಾಗಿ ಬೆಳೆಗಾರರಿಗೆ ಇಲಾಖೆಯಿಂದ ತಿಳುವಳಿಕೆ ನೀಡುವಲ್ಲಿ ತರಬೇತಿ ಸೇರಿದಂತೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ರಫ್ತುಗುಣಮಟ್ಟದ ಮಾವು ಉತ್ಪದನೆಗೆ ಉತ್ತಮ ಕೃಷಿ ಪದ್ಧತಿ ಚಟುವಟಿಕೆಗಳ ಬಗ್ಗೆ ತರಬೇತಿ ಪ್ರಾತ್ಯಕ್ಷತೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br>2. ಮಾವು ಅಭಿವೃದ್ಧಿ ಕೇಂದ್ರ ಮಾಡಿಕೆರೆ, ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯಲ್ಲಿ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (APEDA) ಮತ್ತು ರಾಷ್ಟ್ರೀಯ ಸಸ್ಯ ಸಂರಕ್ಷಣಾ ಸಂಸ್ಥೆ NPPQ) ಯಿಂದ ಮಾನ್ಯತೆ ಪಡೆದ ರಫ್ತು ಉಪಚಾರ ಮತ್ತು ಮೂಲಭೂತ ಸೌರ್ಕಯಗಳ ಪ್ಯಾಕ್ ಹೌಸ್ ಘಟಕವನ್ನು ಸ್ಥಾಪಿಸಲಾಗಿದೆ. ಸದರಿ ಘಟಕಗಳ ಸೌಕರ್ಯಗಳ ಉಪಯೋಗವನ್ನು ರಫ್ತುದಾರರು ಬಳಸುತ್ತಿದ್ದಾರೆ.<br>3. ಮಾವು ಬೆಳೆಯಲ್ಲಿ ಸಸ್ಯ ಸಂರಕ್ಷಣಾ ಕ್ರಮಗಳು, ಸುಧಾರಿತ ಬೇಸಾಯ ಕ್ರಮಗಳು, ಸಮಗ್ರ ಪೋಷಕಾಂಶ ನಿರ್ವಹಣೆ ಕುರಿತು ಕಾಲಕಾಲಕ್ಕೆ ಬೆಳೆ ಸಲಹೆಯನ್ನು ಮಾವು ಬೆಳೆಗಾರರಿಗೆ ನಿಗಮದ ವತಿಯಿಂದ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸ್ಸಿನಂತೆ ನೀಡಲಾಗುತ್ತಿದೆ.<br>4. ರಾಮನಗರ ಜಿಲ್ಲೆ, ಚನ್ನಪಟ್ಟಣ ತಾ. ಭೈರಾಪಟ್ಟಣದಲ್ಲಿ ಕೊಯ್ಲು ನಂತರದ ನಿರ್ವಹಣೆ ಮತ್ತು ಪ್ರಾತ್ಯಕ್ಷಿಕೆ ಸಂಸ್ಕರಣಾ ಘಟಕವನ್ನು ಸ್ಥಾಪಿಸಲಾಗುತ್ತಿದೆ. |

| | | |
|---|---|---|
| | | 5. ರಫ್ತುದಾರರು, ಆಮದುದಾರರು, ಸಗಟು ಖರೀದಿದಾರರು, ಮಾವು ಬೆಳೆಗಾರರು, ರೈತ ಉತ್ಪಾದಕ ಸಂಘಗಳು ಮತ್ತು ಇ ಕಾಮರ್ಸ್ ವ್ಯಾಪಾರಿಗಳು ಸೇರಿದಂತೆ ಖರೀದಿದಾರರ-ಮಾರಟಗಾರರ ಸಂಪರ್ಕ ಸಮಾವೇಶ ಆಯೋಜಿಸಲಾಗಿದೆ.<br>6. ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಮಾವನ್ನು ಗುರುತಿಸಲು *"ಕರ್ ಸಿರಿ"* ಟ್ರೇಡ್ ಮಾರ್ಕ್ ಬ್ರ್ಯಾಂಡ್ ನ್ನು ನೋಂದಯಿಸಲಾಗಿದೆ.<br>7. ಮಾವು ರಫ್ತಿಗೆ ಅಗತ್ಯವಿರುವ ಬೆಳೆಗಾರರ ಮಾವು ತಾಕುಗಳ ನೋಂದಣಿಯನ್ನು ಅಪೆಡಾದ ಮ್ಯಾಂಗೋ ನೆಟ್ ನಲ್ಲಿ ನಿಗಮದ ವತಿಯಿಂದ ನೋಂದಾಯಿಸಲಾಗುತ್ತಿದೆ.<br>8. ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (VTPC) ಹಾಗೂ ಮಾವು ನಿಗಮದ ವತಿಯಿಂದ ಜಂಟಿಯಾಗಿ ರಾಜ್ಯದ ಆಸಕ್ತ ಮಾವು ಬೆಳೆಗಾರರಿಗೆ ಮಾವು ರಫ್ತು ಉದ್ಯಮದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಒದಗಿಸಲಾಗಿದೆ. |

No:HORTI 55 HGM 2024

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು